Regd No B G 155 23-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ವೀರೇಂದ್ರ ಪಾಟೀಲರಿಗೆ ವಿರೋಧ ಪಕ್ಷಗಳ ಬೆಂಬಲ

ನೀರಿನ ಸೌಕರ್ಯಕ್ಕೆ

ಮೈಸೂರು— ನಗರಕ್ಕೆ ನೀರಿನ ಸರಬರಾಜು ಸ್ಕೀಂನ ಎರಡನೆ ಹಂತಕ್ಕೆ ರೂ. 4 ಲಕ್ಷ ಮತ್ತು ಜಯಲಕ್ಷ್ಮೀಪುರದ ಪ್ರಥಮ ಹಂತಕ್ಕೆ ರೂ 5000 ಸರಕಾರ ಮಂಜೂರ್ಮಾಡಿದೆ.

★

ಮೈಸೂರಿಗೆ ಅಹಿತ ಕಾರ್ಯ

ಬೆಂಗಳೂರು— ಪ್ರಧಾನಿಯವರ ಯೋಜನೆ ಪ್ರಕಾರ ಮಹಾರಾಷ್ಟ್ರಕ್ಕೆ ಮೈಸೂರಿನ ಬೆಳಗಾಂ ಜಿಲ್ಲೆಯಲ್ಲಿನ ಸ್ಥಳಗಳು ಮಾತ್ರವಲ್ಲದೆ, ಉತ್ತರ ಕನ್ನಡ ಮತ್ತು ಬೀದರ್ ಜಿಲ್ಲೆಗಳ ಭಾಗಗಳೂ ಸೇರಿರುವವೆಂದು ಹೇಳಲಾಗಿವೆ.

○

ಸತ್ಕಾರ ಸಮಾರಂಭ

ಮೈಸೂರು— ದೇವಾಂಗ ಸಂಘದವರು ನಗರದ ಪುರಸಭಾಧ್ಯಕ್ಷರಾಗಿ ಜುನಾಯಿತರಾಗಿರುವ ಶ್ರೀಯುತ ಬಿ. ಕೆ. ಪುಟ್ಟಯ್ಯನವರ ಗೌರವಾರ್ಥ ನಿನ್ನೆ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ದೇ. ಜವರೇಗೌಡರವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು.

ಇದಿರಾರನ್ನು ಡಿಎಂಕೆ ಆಳುತ್ತಿದೆ

ತಿರುಚಿ— ಡಿಎಂಕೆ ಉತ್ತರರಾಜ್ಯಗಳಲ್ಲಿ ಉನ್ನತನಾಗಿದ್ದು, ಅಲ್ಲಿಯವರು ಭಾರತವು ಇಂತೆರಾರವರಿಂದ ಆಳಲ್ಪಡುತ್ತಿರುವುದೆಂದೂ, ಇಂದಿರಾರವರು ಡಿಎಂಕೆಯಿಂದ ಆಳಲ್ಪಡುತ್ತಿರುವರೆಂದೂ ಭಾವಿಸಲಾಗಿದೆ ಎಂದು ಪಾರ್ಲಿಮೆಂಟು ಸದಸ್ಯ ಶ್ರೀ ಕೃಷ್ಣಮೂರ್ತಿ ಹೇಳಿದರು.

○

ಪ್ರಶಂಸನೀಯ ತ್ಯಾಗ

ಬೊಂಬಾಯಿ — ಮೈಸುಟ್ಟುಕೊಂಡಿದ್ದ ಒಬ್ಬ ಮುಸ್ಲಿಂ ಮಹಿಳೆಯನ್ನು ಉಳಿಸಲು ಚರ್ಮ ಕಸಿಮಾಡುವುದಕ್ಕೆ ಮಾರ್ದಿಹಿಮುತ್ವಾಲಾ ತುಳಸೀದಾಸ್ ರೇ ಎಂಬಾತನು ತ್ವಂಶೇಜ್ಪೆಯಿಂದ ತನ್ನ ಎಡತೊಡೆಯ ಪೂರ್ಣ ಚರ್ಮವನ್ನು ಉದಾರ ದಾನ ಮಾಡಿದನು – ಆ ಮಹಿಯ ಗಂಡನು ಮೂತ್ರರೋಗ ಪೀಡಿತನು ; ನಂಟರಿಷ್ಟರು ಈ ಸಹಾಯ ಮಾಡಲಿಲ್ಲ.

●

ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಕರಣ

ಲಕ್ನೌ— ಉತ್ತರ ಪ್ರದೇಶದ ಸರಕಾರವು ಅಲ್ಲಿಯ ಎಲ್ಲ ಸಕ್ಕರೆ ಕಾರ್ಖಾನೆಗಳನ್ನೂ ಸಹಿಸಿಕೊಳ್ಳಲು ತತ್ವತಃ ನಿರ್ಧರಿಸಿದೆ.

ಕುಡಿದ ರಾಣಿಗೆ ಜುಲ್ಮಾನೆ

ಉಡಕನುಂಡ್— ಮಹಾರಾಷ್ಟ್ರದ ನಂದಗಾಂ ರಾಣಿ ಸಂಯುಕ್ತದೇವಿ, ಮದ್ಯ ಹೊಂದಿದ್ದ ಮತ್ತು ಕುಡಿದಿದ್ದ ಆಪಾದನೆಗಾಗಿ ರೂ. 625 ಜುಲ್ಮಾನೆ ವಿಧಿಸಲಾಯಿತು.

○

ಬ್ರಿಟಿಷ್ ರಾಷ್ಟ್ರೀಯನ ಬಂಧನ

ಬೊಂಬಾಯಿ— ನವೆಂಬರಿನಲ್ಲಿ ಭಾರತಕ್ಕೆ ಬಂದ ಬ್ರಿಟಿಷ್ ರಾಷ್ಟ್ರೀಯ ಜಾಕಿ ತನ್ನ ಊರಿಗೆ ನಾಪಸ್ಸು ಹೋಗಲಿದ್ದವನಲ್ಲಿ ರೂ 50000 ಮೌಲ್ಯದ ಭಾರವಜ್ರಗಳು ಮತ್ತು ವಿದೇಶಿ ಹಣವಿದುವಕ್ಕೆ ಸಾಂತಾ ಕ್ರುಜ್ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್‌ರವರು ಬಂಧಿಸಿದರು.

★

ಕಣ್ಣುಗಳ ದಾನ

ಬೆಂಗಳೂರು— ಮಿಂಟೋ ಮತ್ತು ಸೇಂಟ್ ಮಾರ್ತಾ ಆಸ್ಪತ್ರೆಗಳಲ್ಲಿ ಕಣ್ಣು ಕಸಿಯ ಅನುಕೂಲವಿರುವುದರಿಂದ 1 ಲಕ್ಷ ಕಣ್ಣು ಶೇಖರಿಸಲು ಕಣ್ಣು ದಾನ ಮಾಡುವವರನ್ನು ಸೇರಿಸುವ ಚಳವಳವನ್ನು ಹ್ಯುಮಾನಿಟೀಸ್ ಸರ್ವಿಸ್‌ರವರು ಪ್ರಾರಂಭಿಸಲಿರುವರು.

★

ಶಿವಸೇನಾ ಗೂಂಡಾಕೃತ್ಯ

ಬೊಂಬಾಯಿ— ಶಿವಸೇನೆಯವರು ನಿನ್ನೆ ಸೆರವಣಿಗೆಗಳನ್ನು ನಡೆಸಿ, ಮೈಸೂರು ನಾಯಕರ ಪ್ರತಿರೂಪುಗಳನ್ನು ಸುಟ್ಟರು – ಅಂಬೇಡ್ಕರ್ ಮೈದಾನದಲ್ಲಿ ಸಂಗೀತ, ನೃತ್ಯ, ಘೋಷಣೆ ಕೂಗಾಟಗಳೊಡನೆ, 12 ಅಡಿ ಎತ್ತರದ ಮೈಸೂರು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಪ್ರತಿರೂಪವನ್ನು ಸುಟ್ಟರು – ನಾರಿಮನ್ ಪಾಯಿಂಟ್‌ನಲ್ಲಿ ಶ್ರೀಯುತ ಪಾಟೀಲ್ ಮತ್ತು ಹಳ್ಳಿಕೇರಿಯರ ಪ್ರತಿರೂಪುಗಳನ್ನು ದಹಿಸಿದರು.

ವಿರೋಧಿಗಳ ಬೆಂಬಲ

ಬೆಂಗಳೂರು— ಗಡಿ ಸಮಸ್ಯೆ ಬಗ್ಗೆ ಎಲ್ಲ ವಿರೋಧ ಪಕ್ಷಗಳೂ ವೀರೇಂದ್ರ ಪಾಟೀಲರ ಸರಕಾರಕ್ಕೆ ಬೆಂಬಲ ನೀಡುವವು.

★

ತಟಸ್ಥರಾಷ್ಟ್ರಗಳ ಸಮ್ಮೇಳನ

ಕೊಲಂಬೊ— ತಟಸ್ಥ ಏಷ್ಯಾ ರಾಷ್ಟ್ರಗಳ ಉನ್ನತ ಮಟ್ಟದ ಸಮ್ಮೇಳನವನ್ನು ಮಾರ್ಚಿ 8 ರಿಂದ 12 ರ ಮಧ್ಯೆ ನಡೆಸಲು ಸಿಲೋನ್ ಏರ್ಪಡಿಸಿದೆ.

○

ಪ್ರತ್ಯೇಕ ತೆಲಂಗಾಣ

ಹೈದರಾಬಾದು— ಪ್ರತ್ಯೇಕ ತೆಲಂಗಾಣಾ ಸ್ಥಾಪನೆಯು ಎರಡೂವರೆ ತಿಂಗಳಲ್ಲಿ ಆಗಬೇಕೆಂದೂ, ಅದಕ್ಕಾಗಿ ಚಳವಳಿ ತೀವ್ರಗೊಳಿಸಬೇಕೆಂದೂ ಪ್ರಜಾಸಮಿತಿ ಅಧ್ಯಕ್ಷ ಡಾ || ಚೆನ್ನಾರೆಡ್ಡಿ ಹೇಳಿರುವರು.

○

ಬದ್ರೀನಾಥ್

ಜ್ಯೋಷಿಮತಿ— ಬದ್ರೀನಾಥ ದೇವಾಲಯವು ಮೇ 6 ರಂದು ತೆರೆಯಲ್ಪಡುವುದು – ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ ದೇವಾಲಯಗಳು ಒಂದು ವಾರ ಮುಂಚಿತವಾಗಿ ತೆರೆಯಲ್ಪಡುವವು.

○

ದೈವಭಕ್ತಿ

ಪಶ್ಚಿಮ ಜರ್ಮನಿಯಲ್ಲಿ 1962 ರಿಂದ ಪ್ರಾಟೆಸ್ಟೆಂಟ್ ಮತ್ತು ಕ್ಯಾಥಲಿಕ್ ಚರ್ಚುಗಳಲ್ಲಿ ಭಾನುವಾರದ ಪ್ರಾರ್ಥನಾಸಭೆಗಳಿಗೆ ಹೋಗುತ್ತಿರುವವರ ಸಂಖ್ಯೆ ಕಡಮೆಯಾಗುತ್ತಿದೆ ಎಂಬುದು ಈ ಬಗ್ಗೆ ನಡೆದ ಸರ್ವೆಯಿಂದ ವ್ಯಕ್ತವಾಗುತ್ತದೆ.

★

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ವ್ಯಾಪಾರಿಗಾರರು :

ಬಾಹುಸಾರ್ ಕಂಪೆನಿ,
ಓಲ್ಡ್ ಬ್ಯಾಂಕ್ ರೋಡ್,
ಮೈಸೂರು.

ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ,
ಮೈಸೂರು-4

ಹೊಂಗನೂರು ರೈತರ ಮಹಾಸಭೆ

ದಿನಾಂಕ 31–1–70 ನೇ ಶನಿವಾರ ಅಪರಾಹ್ನ 3 ಘಂಟೆಯಲ್ಲಿ ಹೊಂಗನೂರು ಮಂಡಲ ರೈತರ ಮಹಾಸಭೆಯ ಸರ್ವಸದಸ್ಯರ ಸಭೆ ನಡೆಯಿತು. ಶ್ರೀ ಬಿ.ಟಿ. ವರದರಾಜಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ದೇವತಾ ಪ್ರಾರ್ಥನೆ, ಪುಷ್ಪಾಂಜಲಿ, ಭಾಷಣಗಳು, ಕಾರ್ಯಕಾರಿ ಸಮಿತಿ ಚುನಾವಣೆ. ನಿರ್ಣಯಗಳ ಅಂಗೀಕಾರ ಕಾರ್ಯಕ್ರಮಗಳು ನಡೆದು, ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಗಾಮದಲ್ಲಿ ಮಳೆಯ ಅಭಾವದಿಂದ ಆಗಿರುವ ತೊಂದರೆ, ಫಸಲು ಆಗದಿರುವ ವಿಚಾರದಲ್ಲಿ ಘನ ಸರಕಾರವು ರೈತರಿಗೆ ಅನುಕೂಲವಾಗುವಂತೆ, ಕಂದಾಯ ರಿಮಿಷ್ಣ, ಜಾಲರೂಪವಾಗಿ ವ್ಯವಸಾಯಕ್ಕೆ ಬೇಕಾದ ಬಿತ್ತನೆ, ಗೊಬ್ಬರ, ವ್ಯವಸಾಯ ಖರ್ಚಿಗೆ ಸಾಲ ಕೊಡಿಸಬೇಕೆಂಬ, 1965 ರ ಹಿಂದಿದ್ದ ಕಂದಾಯವನ್ನೇ ವಸೂಲ್ಮಾಡಬೇಕೆಂದು ಪ್ರಾರ್ಥಿಸುವ, ಇತ್ಯಾದಿ ನಿರ್ಣಯಗಳು ಅಂಗೀಕೃತವಾದವು.

ದಿವ್ಯವಾಣಿ

ಕಷ್ಟಗಳನ್ನು ಗೆಲ್ಲುವುದರಲ್ಲಿ ನಿಟ್ಟುಸುರುಗಳಿಗಿಂತ ಮುಗುಳುನಗುವಿನಲ್ಲಿ ಹೆಚ್ಚು ಶಕ್ತಿಯಿದೆ. — ಮಾತಾ

ಪುರಾತನ ಹೋಟಲು ಹರಾಜು

ಪಶ್ಚಿಮ ಜರ್ಮನಿಯಲ್ಲಿ 1411 ರಿಂದ ಇರುವ ಜುಂರಿಯೆರ್ಸ ಹೋಟಲು ಮಾರ್ಚಿ 3 ರಂದು ಹರಾಜು ಹಾಕಲಾಗುವುದೆಂದು ಪ್ರಕಟವಾಗಿದೆ 1590 ರಲ್ಲಿ ಈ ಹೋಟಲು ಕಟ್ಟಡವನ್ನು ಪುನರ್ನಿರ್ಮಾಣ ಮಾಡಿದಾಗ, ಸ್ಥಳೀಯ ಮ್ಯಾಜಿಸ್ಟ್ರೇಟರು, ಇದು ರಾಜಕುಮಾರರ ವಿಶ್ರಾಂತಿಸ್ಥಾನವಾಗಿರುವುದರಿಂದ, ಹೋಟಲು ಮಾಲೀಕರಿಗೆನೂರು ಓಕ್ ಮರದ ಕಾಂತಿಗಳನ್ನು ಬಹುಮಾನಿಸಿದರು ಎಂಬ ಕತೆ ಇದೆ.

ಅಪೆರಾ — ಅನೋಘ 3 ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶಿ ಲ

ಪಾತ್ರ – ವೈಜಯಂತಿಮಾಲ ಧರ್ಮೇಂದ್ರ

ದಿನ 3 ಆಟಗಳು

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

Quality Printing — Neat Binding

Lakshminarasimha Press

Sivarampet, Mysore

Help The Gorakshana

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore

ಪುರಾತಂಡ್ ಅನೋಘ 8 ನೇ ವಾರ

ಶಿ ನ ಅಮೋಘ ಪ್ರಾರಂಭ

ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಎಕ್ಸೆಕ್ಯುಟೀವ್ ಇಂಜಿನಿಯರ್‌ರವರ ಕಛೇರಿ, ಕಟ್ಟಡಗಳ ವಿಭಾಗ, ಮೈಸೂರು - 1

ಸಂಕಿಪ್ತ ಟೆಂಡರ್ ಪ್ರಕಟಣೆ

ತಾ || ಎ. 37 / 7–2–70

ಈ ಕೆಳಗೆ ಕಂಡ ಕೆಲಸಗಳಿಗಾಗಿ ಮೈಸೂರು ಪಿ. ಡಬ್ಲ್ಯು. ಡಿ. ಯಿಂದ ಅಂಗೀಕೃತವಾಗಿರುವ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ವಿಧಾಯಕವಾದ ಫಾರಂನಲ್ಲಿ ಕೆಲಸದ ಹೆಸರು ಬರೆದಿರುವ ಸೀಲಾದ ಕೊಟೇರ್ಷನ್‌ಗಳನ್ನು ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ ಮತ್ತು ಮೈಸೂರು- 1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಅವರ ಕಛೇರಿಯಲ್ಲಿ 25–2–1970 ನೇ ಮಧ್ಯಾಹ್ನ 4 ಘಂಟೆವರೆಗೆ ಅದನ್ನು ಸ್ವೀಕರಿಸಲಾಗುವುದು. ಸ್ವೀಕರಿಸಿದ ಟೆಂಡರುಗಳನ್ನು ಸಾಧ್ಯವಾದರೆ ಅದೇ ದಿನ ಒಡೆಯಲಾಗುವುದು. ಮೈಸೂರು – 1 ರಲ್ಲಿರುವ, ಕಟ್ಟಡಗಳ ವಿಭಾಗದ, ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಂದ 20–2–70 ರಿಂದ 24–2–70 ರವರೆಗೆ (ಎರಡು ದಿನಗಳೂ ಸೇರಿ) ಕೆಲಸದ ಎಲ್ಲಾ ದಿನಗಳಲ್ಲೂ, ಕಛೇರಿಯ ಕೆಲಸದ ವೇಳೆಗಳಲ್ಲಿ ಫಾರಂ ಒಂದಕ್ಕೆ ರೂ. 5/– ಪಡೆದು ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಮೈಸೂರು – 1 ರಲ್ಲಿರುವ, ಕಟ್ಟಡಗಳ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಕೆಲಸಗಳ ಮತ್ತಷ್ಟು ವಿವರಗಳನ್ನು ಮತ್ತು ಟೆಂಡರ್ ಷರತ್ತುಗಳನ್ನು ಪಡೆಯಬಹುದು.

ಟೆಂಡರ್‌ನ್ನು ಅಂಗೀಕರಿಸಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ಕೊಡದೆ ನಿರಾಕರಿಸುವ ಹಕ್ಕು ಕಾದಿರಿಸಲ್ಪಟ್ಟಿದೆ.

ಸೀ. ಕೆಲಸದ ಹೆಸರು ನಂ.	ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ಇಎಂಡಿ	ಕೆಲಸಗಳನ್ನು ಮುಗಿಸಲು ಕಾಲಾವಧಿ	ಕಂಟ್ರಾಕ್ಟರ್ ವರ್ಗ
1. ಮೈಸೂರು ಮಹಾರಾಜರವರ ಹೈಸ್ಕೂಲ್‌ನಲ್ಲಿ ಮೊದಲನೇ ಅಂತಸ್ತಿನಲ್ಲಿ ಹೆಚ್ಚಿನ ತರಗತಿಕೋಣೆಗಳ ನಿರ್ಮಾಣದ ಉಳಿಕೆ ಕೆಲಸ	33700	850	5 ತಿಂಗಳು	3 ಮತ್ತು ಮೇಲ್ಪಟ್ಟ
2. ಮೈಸೂರಿನಲ್ಲಿನ ಹಾಲು ಸರಬರಾಜು ಯೋಜನೆಯಲ್ಲಿ ಹಾಲು ಸಂಸ್ಕರಣ ಯಂತ್ರ ಸಾಮಗ್ರಿಗಳ ಕಟ್ಟಡಕ್ಕೆ ನೀರು ಸರಬರಾಜು ಮತ್ತು ಸ್ಯಾನಿಟರಿ ಸಂಪರ್ಕವನ್ನು ಒದಗಿಸುವುದು	10600	265	2 ತಿಂಗಳು	4 ಮತ್ತು ಮೇಲ್ಪಟ್ಟ
3. ಮೈಸೂರುನಲ್ಲಿನ ಹಾಲು ಸರಬರಾಜು ಯೋಜನೆಯಲ್ಲಿ ಹಾಲು ಸಂಸ್ಕರಣ ಯಂತ್ರ ಸಾಮಗ್ರಿಗಳ ಕಟ್ಟಡಕ್ಕೆ ರೋಲಿಂಗ್ ಷಟರ್ಸ್ ಒದಗಿಸುವುದು ಮತ್ತು ಫಿಕ್ಸ್ ಮಾಡುವುದು	6000	150	2 ತಿಂಗಳು	ಡಿಟೋ

ಸಹಿ/– ವೈ. ಶಿವಪ್ಪ,
ಎಕ್ಸಿಕ್ಯುಟೀವ್ ಇಂಜಿನಿಯರ್, ಕಟ್ಟಡಗಳ ವಿಭಾಗ.